**<u>ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು ರವರು ನಿಯಮ72ರ ಅಡಿಯಲ್ಲಿ ಕೇಳಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.</u>**

**ಕೋಲಾರ ನಗರಕ್ಕೆ ಹೊಂದಿಕೊಂಡಿರುವ ಶತಶೃಂಗ ಪರ್ವತದ ಅಂತರಗಂಗೆ ದಕ್ಷಿಣ ಕಾಶಿ ವಿಶ್ವೇಶ್ವರ ದೇವಸ್ಥಾನ, ಈ ಕ್ಷೇತ್ರಕ್ಕೆ ಸುಮಾರು 800 ವರ್ಷಗಳ ಇತಿಹಾಸವಿದ್ದು, ಈ ಕ್ಷೇತ್ರವನ್ನು ದಕ್ಷಿಣದ ಕಾಶಿ ಎಂದು ಕರೆಯಲ್ಪಡುತ್ತದೆ. ಕೋಲಾರ ನಗರದಿಂದ ಕೇವಲ 2 ಕಿ.ಮೀ ದೂರದಲ್ಲಿ ಈ ಕ್ಷೇತ್ರವಿದ್ದು, ಇದಕ್ಕೆ ಸಂಪರ್ಕಿಸುವ ರಸ್ತೆಯು ಸಂಪೂರ್ಣ ಹಾಳಾಗಿದ್ದು, ಹಿಂದಿನ ಸರ್ಕಾರವು ಈ ರಸ್ತೆಯ ಹಾಗೂ ಕ್ಷೇತ್ರದ ಅಭಿವೃದ್ಧಿಗೆ ಹಣ ಬಿಡುಗಡೆ ಮಾಡಿರುವುದು ಸರಿಯಷ್ಟೇ. ಆದರೆ ಸದರಿ ಹಣವನ್ನು ಪ್ರಸ್ತುತ ಸರ್ಕಾರ ವಾಪಸ್ಸು ಪಡೆದಿರುತ್ತದೆ. ಈ ಕೂಡಲೇ ವಾಪಸ್ಸು ಪಡೆದಿರುವ ಸದರಿ ಹಣವನ್ನು ಬಿಡುಗಡೆಗೊಳಿಸಿ ಕೋಲಾರದಿಂದ ಅಂತರಗಂಗೆ ಬೆಟ್ಟದ ಬುಡದವರೆಗೂ ರಸ್ತೆಯನ್ನು ಅಭಿವೃದ್ಧಿಪಡಿಸಿ ಬೆಟ್ಟದ ಬುಡದಿಂದ ಕಾಶಿವಿಶ್ವೇಶ್ವರ(ಅಂತರಗಂಗೆ) ದೇವಸ್ಥಾನದವರೆಗೂ ರಸ್ತೆ ಸಂಪರ್ಕವನ್ನು ನೀಡಲು ಸಾಕಷ್ಟು ಸಚಿವರನ್ನು ಸದನದ ಒಳಗೆ ಮತ್ತು ಹೊರಗೂ ಮನವಿ ಮಾಡಿದರೂ ಸಹ ಇಲ್ಲಿಯವರಗೆ ಸರ್ಕಾರ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಆದ ಕಾರಣ, ಇದರ ಬಗ್ಗೆ ಸೂಕ್ತ ಕ್ರಮಕೈಗೊಳ್ಳುವ ಕುರಿತು ಮಾನ್ಯ ಪ್ರವಾಸೋದ್ಯಮ ಹಾಗೂ ಪರಿಸರ ಮತ್ತು ಜೀವಿಪರಿಸ್ಥಿತಿ ಸಚಿವರ ಗಮನ ಸೆಳೆಯ ಬಯಸುತ್ತೇನೆ.**

*******

ಪ್ರವಾಸೋದ್ಯಮ ನೀತಿ 2020-26 ರಡಿಯಲ್ಲಿ ಕೋಲಾರ ಜಿಲ್ಲೆಯ, ಕೋಲಾರ ತಾಲ್ಲೂಕಿನಲ್ಲಿರುವ ಅಂತರಗಂಗೆಯನ್ನು ಪ್ರವಾಸಿ ತಾಣವನ್ನಾಗಿ ಗುರುತಿಸಲಾಗಿರುತ್ತದೆ.

2018-19ನೇ ಸಾಲಿನ ಬಂಡವಾಳ ವೆಚ್ಚಗಳಡಿ ಸರ್ಕಾರದ ಆದೇಶ ಸಂಖ್ಯೆ: ಪ್ರಇ/250/ಪ್ರವಾಯೋ/2018, ದಿನಾಂಕ:19.09.2018ರ ಅನುಬಂಧದ ಬೆಂಗಳೂರು ವಿಭಾಗದ ಕ್ರಮ ಸಂಖ್ಯೆ: 31ರಲ್ಲಿ ಕೋಲಾರ ಜಿಲ್ಲೆ, ಕೋಲಾರ ತಾಲ್ಲೂಕಿನಲ್ಲಿರುವ ಅಂತರಗಂಗೆ ಶ್ರೀ ಕಾಶೀವಿಶ್ವೇಶ್ವರ ದೇವಾಲಯ ಸಂಪರ್ಕಿಸುವ ಕೂಡು ರಸ್ತೆ ಅಭಿವೃದ್ಧಿ (ಸಿಮೆಂಟ್ ಕಾಂಕ್ರೀಟ್ ರಸ್ತೆ) ಕಾಮಗಾರಿಯನ್ನು ರೂ.50.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಅನುಮೋದನೆ ನೀಡಲಾಗಿತ್ತು. ಸದರಿ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್., ಸಂಸ್ಥೆಯ ಮೂಲಕ ಕೈಗೊಳ್ಳಲು ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ: ಪ್ರಇ/336/ಪ್ರವಾಯೋ/2018, ದಿ:26.12.2018ರಲ್ಲಿ ಮಂಜೂರಾತಿ ನೀಡಲಾಗಿತ್ತು. ಅದರನ್ವಯ, ಸದರಿ ಪ್ರವಾಸಿ ತಾಣದಲ್ಲಿ ರಸ್ತೆ ಕಾಮಗಾರಿಯನ್ನು ಪ್ರಾರಂಭಿಸಲು ರೂ.49,75,000/-ಗಳನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಯವರಿಗೆ ಬಿಡುಗಡೆ ಮಾಡಲಾಗಿತ್ತು.

ಬಂಡವಾಳ ವೆಚ್ಚಗಳ ಅಡಿಯಲ್ಲಿ ಮಂಜೂರಾಗಿದ್ದ ಕೋಲಾರ ತಾಲ್ಲೂಕಿನಲ್ಲಿರುವ ಅಂತರಗಂಗೆ ಶ್ರೀ ಕಾಶಿವಿಶ್ವೇಶ್ವರ ದೇವಾಲಯ ಸಂಪರ್ಕಿಸುವ ಕೂಡು ರಸ್ತೆ ಅಭಿವೃದ್ಧಿ (ಸಿಮೆಂಟ್ ಕಾಂಕ್ರೀಟ್ ರಸ್ತೆ) ಕಾಮಗಾರಿಗೆ ಅರಣ್ಯ ಇಲಾಖೆಯ ಅನುಮತಿ ದೊರಕದೇ ಇರುವ ಕಾರಣದಿಂದಾಗಿ ಇದೂವರೆಗೂ ಕಾಮಗಾರಿಯನ್ನು ಪ್ರಾರಂಭಿಸಲು ಸಾಧ್ಯವಾಗದ ಕಾರಣ, ಸದರಿ ಕಾಮಗಾರಿಯನ್ನು ಸರ್ಕಾರದ ಆದೇಶ ಸಂಖ್ಯೆ: ಟಿಓಆರ್/190/ಟಿಡಿಪಿ/2020, ದಿನಾಂಕ:07.09.2020ರ ಅನುಬಂಧದ ಬೆಂಗಳೂರು ವಿಭಾಗದ ಕ್ರಮ ಸಂಖ್ಯೆ: 25ರಲ್ಲಿ ರದ್ದುಪಡಿಸಲಾಗಿರುತ್ತದೆ.

ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ, ಕೋಲಾರ ರವರು ಸದರಿ ಕಾಮಗಾರಿಯನ್ನು ಕೈಗೊಳ್ಳಲು ಹಾಲಿ ಇರುವ ಕಚ್ಚಾ ರಸ್ತೆಯನ್ನು ಪ್ರವಾಸಿಗರ ಉಪಯೋಗಕ್ಕೆ ಗಿಡ-ಮರಗಳಿಗೆ ಹಾನಿ ಮಾಡದಂತೆ ಅಭಿವೃದ್ಧಿಪಡಿಸಲು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಂಗಳೂರುರವರಿಗೆ ಪತ್ರವನ್ನು ಬರೆದು ಅನುಮತಿಯನ್ನು ಕೋರಲಾಗಿತ್ತು ಎಂದು ತಿಳಿಸಿರುತ್ತಾರೆ. ಈ ಸಂಬಂಧ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಂಗಳೂರುರವರು ಉಪ ಸಂರಕ್ಷಣಾಧಿಕಾರಿಗಳು, ಕೋಲಾರರವರಿಗೆ ಸದರಿ ಪ್ರಸ್ತಾಪಿತ ಪ್ರದೇಶವು ಅರಣ್ಯ ಇಲಾಖೆಯ ವ್ಯಾಪ್ತಿಗೆ ಒಳಪಡುವುದೇ ಎಂಬುದರ ಬಗ್ಗೆ

ನಿಯಮಾನುಸಾರ ಪರಿಶೀಲಿಸಿ, ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಸ್ಪಷ್ಟ ಮತ್ತು ವಾಸ್ತವಿಕ ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಅದರಂತೆ, ಉಪ ಸಂರಕ್ಷಣಾಧಿಕಾರಿಗಳು ಕೋಲಾರರವರು ಮಾನ್ಯ ಜಿಲ್ಲಾಧಿಕಾರಿಗಳು ಅರಣ್ಯೇತರ ಕಂದಾಯ ಭೂಮಿಗಳನ್ನು ಅರಣ್ಯ ಬೆಳಸಲು ಅನುವಾಗುವಂತೆ ಕೆಲವು ಷರತ್ತುಗಳನ್ನು ವಿಧಿಸಿ ಹಾಗೂ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಲಂ 71ರಡಿ ಅರಣ್ಯ ಇಲಾಖೆಗೆ ವರ್ಗಾಯಿಸಲಾಗಿರುತ್ತದೆ ಹಾಗೂ ಸದರಿ ಸ್ಥಳಗಳಲ್ಲಿ ಕಾಮಗಾರಿಯನ್ನು ಪ್ರಾರಂಭಿಸಲು ಮಾನ್ಯ ಜಿಲ್ಲಾಧಿಕಾರಿಗಳ ಅನುಮತಿ ದೊರಕಿದಲ್ಲಿ ಕ್ರಮವಹಿಸಲಾಗುವುದೆಂದು ವರದಿಯನ್ನು ಸಲ್ಲಿಸಿರುತ್ತಾರೆ. ಈ ಸಂಬಂಧ ಕಾಮಗಾರಿಯನ್ನು ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಆದರೆ ಅಂತರಗಂಗೆ ಶ್ರೀ ಕಾಶಿವಿಶ್ವೇಶ್ವರ ದೇವಾಲಯವು ಧಾರ್ಮಿಕ ಸ್ಥಳವಾಗಿದ್ದು, ಈ ಸ್ಥಳಕ್ಕೆ ಮೆಟ್ಟಿಲುಗಳು ಇರುವುದರಿಂದ ವಯೋವೃದ್ಧರು ಅಂಗವಿಕಲರು ಹಾಗೂ ಮಕ್ಕಳು ಮೆಟ್ಟಿಲು ಹತ್ತಲು ತೊಂದರೆಯಾಗಿದ್ದು, ಶ್ರೀ ಕಾಶಿವಿಶ್ವೇಶ್ವರ ದೇವಾಲಯದ ಈ ತಾಣಕ್ಕೆ ಎಲ್ಲಾ ವಯಸ್ಸಿನ ಪ್ರವಾಸಿಗರು ವಾರದ ಅಂತ್ಯದಲ್ಲಿ ಹಾಗೂ ಪ್ರತಿದಿನ ಸಾವಿರಾರು ಸಂಖ್ಯೆಯಲ್ಲಿ ಭೇಟಿ ನೀಡುತ್ತಾರೆ ಹಾಗೂ ಸದಾಕಾಲ ಬಸವಣ್ಣ ಬಾಯಿಂದ ನೀರು ಬರುವ ವಿಸ್ಮಯ ಈ ತಾಣದಲ್ಲಿ ನಾವು ನೋಡಬಹುದಾಗಿರುತ್ತದೆ. ಸದರಿ ದೇವಾಲಯಕ್ಕೆ ಕೂಡುರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಬೇಕಾಗಿರುವುದು ತುಂಬಾ ಅವಶ್ಯಕವಾಗಿರುತ್ತದೆ. ಆದುದರಿಂದ ರದ್ದುಪಡಿಸಿರುವ ಕಾಮಗಾರಿಯನ್ನು ಪುನಃ ಕೈಗೊಳ್ಳಲು ಅವಕಾಶ ಮಾಡಿಕೊಡಲು ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ, ಕೋಲಾರರವರು ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ: ಟಿಒಆರ್/38/ಟಿಡಿಪಿ/2021, ದಿನಾಂಕ: 12/08/2021ರಲ್ಲಿ ಕೋಲಾರ ಜಿಲ್ಲೆ, ಅಂತರಗಂಗೆ ಶ್ರೀ ಕಾಶಿವಿಶ್ವೇಶ್ವರ ದೇವಾಲಯ ಸಂಪರ್ಕಿಸುವ ಕೂಡುರಸ್ತೆ ಅಭಿವೃದ್ಧಿ (ಸಿಮೆಂಟ್ ಕಾಂಕ್ರೀಟ್ ರಸ್ತೆ) ರೂ.50.00 ಲಕ್ಷಗಳ ಅಂದಾಜು ವೆಚ್ಚದ ಕಾಮಗಾರಿಯನ್ನು ರದ್ದುಪಡಿಸಲು ಆದೇಶಿಸಿರುವುದನ್ನು ಮಾರ್ಪಡಿಸಿ ಸದರಿ ಕಾಮಗಾರಿಗೆ ಪುನರ್ ಮಂಜೂರಾತಿ ನೀಡಲಾಗಿದೆ.

ಸದರಿ ಕಾಮಗಾರಿಗೆ ಈಗಾಗಲೇ ರೂ.50.00 ಲಕ್ಷಗಳ ಪೂರ್ಣ ಅನುದಾನವನ್ನು ಅನುಷ್ಠಾನ ಸಂಸ್ಥೆಯಾದ, ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಐ.ಡಿ.ಎಲ್. ಸಂಸ್ಥೆಯವರಿಗೆ ಬಿಡುಗಡೆ ಮಾಡಲಾಗಿದೆ. ಅದರಂತೆ, ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್., ಕೋಲಾರರವರು ಅಂದಾಜು ಪಟ್ಟಿಯನ್ನು ಸಲ್ಲಿಸಿದ್ದು, ಸಕ್ಷಮ ಪ್ರಾಧಿಕಾರರಾದ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ, ಕೋಲಾರ ಜಿಲ್ಲೆರವರಿಂದ ಆಡಳಿತಾತ್ಮಕ ಅನುಮೋದನೆ ನೀಡಬೇಕಾಗಿದೆ. ಅದರಂತೆ, ಜಿಲ್ಲಾಧಿಕಾರಿಗಳಿಗೆ ತುರ್ತಾಗಿ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಪ್ರವಾಸೋದ್ಯಮ ಇಲಾಖೆಯಿಂದ ನಿರ್ದೇಶಿಸಲಾಗುತ್ತಿದೆ.

**ಟಿಒಆರ್ 252 ಟಿಡಿವಿ 2022**

**(ಆನಂದ್ ಸಿಂಗ್)**
ಪ್ರವಾಸೋದ್ಯಮ, ಜೀವಿಶಾಸ್ತ್ರ,
ಮತ್ತು ಪರಿಸರ ಸಚಿವರು

31 - CA1X 13/9